2013

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1635
ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 20.03.2020
ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆ	ಉತ್ತರ	Answers
ಅ)	ಬೀದರ್ ಜಿಲ್ಲೆಯಲ್ಲಿ ವಿಶ್ವ ವಿಖ್ಯಾತ ಬಿದ್ರಿ ಕಲೆಯಲ್ಲಿ ತೊಡಗಿಸಿಕೊಂಡಿರುವ ಕುಟುಂಬಗಳ ಸಂಖ್ಯೆ ಎಷ್ಟು;	ಬೀದರ್ ಜಿಲ್ಲೆಯಲ್ಲಿ ವಿಶ್ವ ವಿಖ್ಯಾತ ಬಿದ್ರಿ ಕಲೆಯಲ್ಲಿ ಸುಮಾರು 300 ಕುಟುಂಬಗಳು ತೊಡಗಿದ್ದು ಇದರಲ್ಲಿ 108 ಕರಕುಶಲಕರ್ಮಿಗಳು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಲ್ಲಿ ನೊಂದಾಯಿಸಲ್ಪಟ್ಟಿದ್ದಾರೆ.	About 300 artisans are engaged in the World renowned Bidari Craft in Bidar Distict 108 artisans have registered with the KSHDC.
ಆ)	ಬಿದ್ರಿ ಕಲೆಯನ್ನು ಉಳಿಸಿ ಉತ್ತೇಜನ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?	ನಿಗಮದ ವತಿಯಿಂದ ಬಿದರಿ ಕರಕುಶಲಕರ್ಮಿಗಳಿಗೆ ನೀಡುತ್ತಿರುವ ಸೌಲಭ್ಯಗಳ ವಿವರವು ಕೆಳಗಿನಂತಿವೆ: ➢ ನೊಂದಾಯಿತ ಬಿದರಿ ಕರಕುಶಲಕರ್ಮಿಗಳಿಗೆ ಶೇ. 50 ರಷ್ಟು ರಿಯಾಯಿತಿ ದರದಲ್ಲಿ ಬೆಳ್ಳಿ ಮತ್ತು ಸತು ವಿತರಣೆ. ➢ ಇದನ್ನು "ಅಲ್ಪಪರಿಚಿತ ವಸ್ತು" ಎಂದು ವರ್ಗೀಕರಿಸಲಾಗಿದ್ದು ಅಲ್ಪಪರಿಚಿತ ವಸ್ತುಗಳ ಮಾರಾಟದ ಮೇಲೆ ಶೇ. 20ರಷ್ಟು ರಿಯಾಯಿತಿ ದರ. ➢ ಬಿದರಿ ಕರಕುಶಲಕರ್ಮಿಗಳಿಗೆ ಆರೋಗ್ಯ ತಪಾಸಣೆಯೊಂದಿಗೆ ಕಣ್ಣಿನ ಪರೀಕ್ಷೆ ಮತ್ತು ಕನ್ನಡಕ ವಿತರಿಸಲಾಗುತ್ತಿದೆ. ➢ ಬಿದರಿ ವಸ್ತುಗಳನ್ನು ಸಿದ್ದಪಡಿಸಲು ಸುಧಾರಿತ ಉಪಕರಣಗಳನ್ನು ಸಹ ನೀಡಲಾಗಿದೆ. ➢ Dutch Assisted Program ಯೋಜನೆಯಡಿ (84) ವಿಶ್ವ ಯೋಜನೆಯಡಿ (86) & ಅಭಿವೃದ್ಧಿ ಆಯುಕ್ತರು (ಕರಕುಶಲ) ವತಿಯಿಂದ (23) ಒಟ್ಟು 193 ವಸತಿ ಕಾರ್ಯಗಾರಗಳನ್ನು (Living-cum-Workshed)	Benefits provided by Corporation to Bidari Artisans are as follows: ➢ Registered Bidari artisans have been provided raw materials like Silver and Zinc at 50% rebate. ➢ It is classified as lesser known crafts and to promote its sales, Sold at 20% discount. ➢ Regular health and eye checkup and distribution of spectacles to artisans. ➢ Improvised tool kits is distributed to manufacture Bidari ware. ➢ 193 Living – Cum- Worksheds have been provided to artisans under various schemes like Dutch Assisted Program (84), vishwa (86) and Development commissioner (Handicraft) (23). ➢ Rs.10,000/- is being provided as a cremation expenditure for registered

		ನಿರ್ಮಿಸಿ ಕರಕುಶಲಕರ್ಮಿಗಳಿಗೆ ನೀಡಲಾಗಿದೆ. ➢ ಮೃತರಾದ ಒಬ್ಬ ಕರಕುಶಲಕರ್ಮಿಗೆ ರೂ.10,000/- ಗಳನ್ನು ಅಂತ್ಯ ಸಂಸ್ಕಾರದ ಮೊತ್ತವನ್ನಾಗಿ ನೀಡಲಾಗುತ್ತಿದೆ. ➢ ಬಿದರಿ ಕರಕುಶಲಕರ್ಮಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಿ ಪ್ರಾತ್ಯಕ್ಷಿಕೆ ನೀಡಲು ಹಾಗೂ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಿಕೊಡಲಾಗುತ್ತಿದೆ. ➢ ಭೌಗೋಳಿಕ ಗುರುತಿನ ನೋಂದಣಿ ಹೊಂದಿರುವ ಬಿದರಿ ಕಲಾಕೃತಿಗಳನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮತ್ತು ಆನ್‌ಲೈನ್ ಮುಖಾಂತರ ಮಾರಾಟ ಮಾಡುವ ಮೂಲಕ ಸದರಿ ಕರಕುಶಲಕಲೆಯ ಕುಶಲಕರ್ಮಿಗಳಿಗೆ ಹೆಚ್ಚಿನ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲು ಪ್ರಯತ್ನ ಮಾಡಲಾಗುತ್ತಿದೆ.	artisans from the Corporation. ➢ Assistance for Bidari artisans is provided to participate in National and State level exhibitions to promote the craft and for marketing their products. ➢ Efforts are being made to provide Marketing facilities for Bidari products which have Geographical Indicators tag at Kempegowda International Airport and promote the craft via e-commerce sales through Online.

ಸಿಐ 54 ಸಿಎಸ್‌ಸಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.1635ಕ್ಕೆ ಪೂರಕ ಟಿಪ್ಪಣಿ

ಕರ್ನಾಟಕ ರಾಜ್ಯದ ಬೀದರ್ ಜಿಲ್ಲೆಯಲ್ಲಿ ಕಳೆದ 600 ವರ್ಷಗಳಿಂದ ಬಿದರಿ ಕಲೆಯನ್ನು ಉಪಯೋಗಿಸಿಕೊಂಡು ಕಲಾಕೃತಿಗಳನ್ನು ಕರಕುಶಲಕರ್ಮಿಗಳು ತಯಾರಿಸುತ್ತಿದ್ದಾರೆ. ಪ್ರಸ್ತುತ ಬೀದರ್ ಜಿಲ್ಲೆಯಲ್ಲಿ ಸದರಿ ಕಲೆಯಲ್ಲಿ ತೊಡಗಿಸಿಕೊಂಡಿರುವ ಕರಕುಶಲಕರ್ಮಿಗಳು ಅಂದಾಜು 300 ಇದ್ದು, ಅದರಲ್ಲಿ ನಿಗಮದೊಂದಿಗೆ ನೊಂದಾಯಿಸಿಕೊಂಡಿರುವ ಕರಕುಶಲಕರ್ಮಿಗಳು 108.

ಬಿದರಿ ಕಲಾಕೃತಿಯು ತನ್ನ ಗಟ್ಟಿತನಕ್ಕೆ ಹಾಗೂ ತುಕ್ಕು ರಹಿತವಾಗಿರುವುದಕ್ಕೆ ಖ್ಯಾತಿ ಹೊಂದಿರುತ್ತದೆ. ಬಿದರಿ ಕಲಾಕೃತಿಯಲ್ಲಿ ಪ್ರಮುಖವಾಗಿ 5 ಮುಖ್ಯ ವಿಧಗಳಿದ್ದು, ಅವುಗಳೆಂದರೆ, ತರ್ಕಾಶಿ, ತೆನ್ನಿಷಾನ್, ಮಹ್ತಾಬಿ, ಜರ್ನಿಷಾನ್ ಮತ್ತು ಜರ್ಬುಲಂದ್. ಬಿದರಿ ಕಲಾಕೃತಿ ಭೌಗೋಳಿಕ ಗುರುತನ್ನು ಹೊಂದಿರುತ್ತದೆ.

ಸರ್ಕಾರ / ನಿಗಮದ ನಿಗಮದ ವತಿಯಿಂದ ಬಿದರಿ ಕುಶಲಕರ್ಮಿಗಳಿಗೆ ನೀಡುತ್ತಿರುವ ಸವಲತ್ತು /ಸೌಲಭ್ಯಗಳ ವಿವರ ಕೆಳಕಂಡಂತಿದೆ:

1. ಕಚ್ಚಾ ವಸ್ತುಗಳಾದ ಬೆಳ್ಳಿ ಮತ್ತು ಸತುವನ್ನು ಶೇ. 50 ರ ರಿಯಾಯಿತಿ ದರದಲ್ಲಿ ಹಂಚಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಕಚ್ಚಾ ವಸ್ತುಗಳ ಹಂಚಲಾದ ವಿವರ ಕೆಳಕಂಡಂತಿದೆ:

ಕ್ರ. ಸಂ.	ವಿವರ	2016–17	2017–18	2018–19
1.	ಬೆಳ್ಳಿ (ಕೆ.ಜಿ.ಗಳಲ್ಲಿ)	44.200	28.200	42.200
2.	ಸತು (ಕೆ.ಜಿ.ಗಳಲ್ಲಿ)	2760.750	1698.050	2862.100

ಕಚ್ಚಾ ವಸ್ತುಗಳನ್ನು ಶೇ. 50 ರ ರಿಯಾಯಿತಿ ದರದಲ್ಲಿ ನೀಡುತ್ತಿದ್ದರೂ, ಉಳಿದ ಶೇ. 50 ರ ಕಚ್ಚಾ ವಸ್ತುವಿನ ದರವನ್ನು ಸಾಲವನ್ನಾಗಿ ನೀಡುತ್ತಿದ್ದು, ಕುಶಲಕರ್ಮಿಗಳು ಸಿದ್ದಪಡಿಸಿದ ಕಲಾಕೃತಿಗಳನ್ನು ನಿಗಮಕ್ಕೆ ಸರಬರಾಜು ಮಾಡುವ ಸಂದರ್ಭದಲ್ಲಿ ಸದರಿ ಸಾಲವನ್ನು ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ.

2. ನಿಗಮದ ವತಿಯಿಂದ ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಿ, ಕುಶಲರ್ಮಿಗಳಿಗೆ ಅವಶ್ಯಕತೆಯಿರುವ ಯಂತ್ರೋಪಕರಣ ಮತ್ತು ಉಪಕರಣಗಳನ್ನು ಅಳವಡಿಸಲಾಗಿದೆ.

ನಿಗಮದಲ್ಲಿ ನೊಂದಾಯಿತ ಹಾಗೂ ನೊಂದಾಯಿತವಲ್ಲದ ಕುಶಲಕರ್ಮಿಗಳು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

3. ನಿಗಮವು ಸಿದ್ಧಪಡಿಸಿದ ಬಿದರಿ ಕಲಾಕೃತಿಗಳನ್ನು ಕುಶಲಕರ್ಮಿಗಳಿಂದ ಖರೀದಿಸಿ, ಭಾರತದಾದ್ಯಂತ ತನ್ನ 12 ಮಾರಾಟ ಮಳಿಗೆಗಳ ಮುಖಾಂತರ ಮಾರಾಟ ಮಾಡಿ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

4. ಸದರಿ ಕಲೆಯನ್ನು ಅಲ್ಪಪರಿಚಿತ ಕಲೆಯೆಂದು ಪರಿಗಣಿಸಿದ್ದು, ಸದರಿ ಕಲೆಗೆ ಪ್ರೋತ್ಸಾಹಿಸಲು ಶೇ. 20 ರಷ್ಟು ರಿಯಾಯಿತಿ ದರವನ್ನು ಗ್ರಾಹಕರಿಗೆ ನೀಡಲಾಗುತ್ತಿದೆ.

ಕಳೆದ ಮೂರು ಸಾಲಿನ ಬಿದರಿ ಕಲಾಕೃತಿಯ ಮಾರಾಟ ವಿವರ ಕೆಳಕಂಡಂತಿದೆ:

ಕ್ರ. ಸಂ.	ವಿವರ	2016-17	2017-18	2018-19
1	ಬಿದರಿ ಕಲಾಕೃತಿಯ ಮಾರಾಟ ವಿವರ (ರೂ. ಗಳಲ್ಲಿ)	33,45,695.00	50,76,997.00	49,81,368.00

5. ಇದಲ್ಲದೆ ಕುಶಲಕರ್ಮಿಗಳು ನೇರವಾಗಿ ಅಂದಾಜು ರೂ. 60.00 ರಿಂದ ರೂ.70.00 ಲಕ್ಷಗಳ ಮೌಲ್ಯದ ಕಲಾಕೃತಿಗಳನ್ನು ಪ್ರತಿ ವರ್ಷ ಮಾರಾಟ ಮಾಡುತ್ತಿದ್ದಾರೆ.

6. ನಿಗಮದ ವತಿಯಿಂದ ಕುಶಲಕರ್ಮಿಗಳಿಗೆ ಆರೋಗ್ಯ ತಪಾಸಣೆ ಹಮ್ಮಿಕೊಂಡಿದ್ದು, ಅವಶ್ಯಕತೆಯಿದ್ದ ಕುಶಲಕರ್ಮಿಗಳೀಗೆ ಕನ್ನಡಕಗಳನ್ನು ವಿತರಿಸಲಾಗಿದೆ.

7. ಅಭಿವೃದ್ಧಿ ಆಯುಕ್ತರು (ಕರಕುಶಲ) ಭಾರತ ಸರ್ಕಾರ, ಇಲಾಖೆಯೊಂದಿಗೆ ನೊಂದಾಯಿತರಾಗಿರುವ ಮಾಸ್ಟರ್ ಕ್ರಾಫ್ಟ್‌ಮೆನ್ ರವರಿಂದ 2016-17ನೇ ಸಾಲಿನಲ್ಲಿ ಭಾರತ ಸರ್ಕಾರದ ಯೋಜನೆಯಡಿ 30 ಕುಶಲಕರ್ಮಿಗಳಿಗೆ ತಾಂತ್ರಿಕ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.

8. ತರಬೇತಿ ಪಡೆದ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳನ್ನು ಹಂಚಿಕೆ ಮಾಡಲಾಗಿದೆ.

9. ಕುಶಲಕರ್ಮಿಗಳಾದ ಶ್ರೀ ಶಾ ರಶೀದ್ ಅಹ್ಮದ್ ಕ್ವಾದ್ರಿ ಹಾಗೂ ಶ್ರೀ ಅಬ್ದುಲ್ ರವೂಫ್ ರವರಿಗೆ ಗೌರವಾನ್ವಿತ ಭಾರತದ ರಾಷ್ಟ್ರಪತಿಯವರು ಭಾರತದದ ಅತ್ಯುನ್ನತ ಗೌರವವಾದ ಶಿಲ್ಪಗುರು ಗೌರವನ್ನು ನೀಡಿ ಸನ್ಮಾಸಿರುತ್ತಾರೆ. ಇದಲ್ಲದೇ ಸದರಿ ಕುಶಲಕರ್ಮಿಗಳು ರಾಷ್ಟ್ರ ಪ್ರಶಸ್ತಿಯನ್ನು ಸಹ ಪಡೆದಿರುತ್ತಾರೆ. ಇವರೊಂದಿಗೆ ಶ್ರೀ ಮಯೂಜಿದ್ದೀನ್ ರವರು ಸಹ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿರುತ್ತಾರೆ. ರಾಜ್ಯ ಸರ್ಕಾರವು ಸಹ ಬಿದರಿ ಕಲಾಕೃತಿಯ ಕುಶಲಕರ್ಮಿಗಳನ್ನು ಗುರುತಿಸಿ, ಈ ಕುಶಲಕರ್ಮಿಗಳಾದ ಶ್ರೀ ಸೈಫುದ್ದಿನ್, ಶ್ರೀ ರಾಜ್

ಕುಮಾರ್, ಶ್ರೀ ಅಬ್ದುಲ್ ಹಕಿಂ, ಶ್ರೀಮತಿ ಲಕ್ಷ್ಮೀಬಾಯಿ ಮತ್ತು ಶ್ರೀ ಮಜೀದ್ ಖಾದ್ರಿ ರವರಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ.

10. ನಿಗಮದ ವತಿಯಿಂದ ನೊಂದಾಯಿತಲಾಗಿರುವ ಕುಶಲಕರ್ಮಿಯು ಮೃತಪಟ್ಟ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ರೂ.10,000/- ಗಳನ್ನು ಅಂತ್ಯ ಸಂಸ್ಕಾರಕ್ಕಾಗಿ ನೀಡಲಾಗುತ್ತಿದೆ. 2016ನೇ ಸಾಲಿನಿಂದ 12 ಮೃತ ಹೊಂದಿದ ಕುಶಲಕರ್ಮಿಯ ಕುಟುಂಬಕ್ಕೆ ಅಂತ್ಯ ಸಂಸ್ಕಾರದ ಮೊತ್ತವನ್ನು ನೀಡಲಾಗಿದೆ.

11. ನಿಗಮವು M/s IRHPL (Indian Retail Handicrafts Pvt limited) ರವರೊಂದಿಗೆ ಬಿದರಿ ಕಲಾಕೃತಿಗಳನ್ನು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ನಿರ್ಗಮನ) ಮಾರಾಟ ಮಾಡಲು ಒಡಂಬಡಿಕೆ ಮಾಡಿಕೊಂಡಿದೆ.

12. ಬಿದರಿ ಕಲಾಕೃತಿಗಳ ಮಾರಾಟ ಹೆಚ್ಚಿಸಲು ನಿಗಮವು ಫ್ಲಿಪ್‌ಕಾರ್ಟ್ (Flipcart) ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಕ್ರಿಯೆಯು ಸಹ ಪ್ರಗತಿಯಲ್ಲಿದೆ.

13. ಇದಲ್ಲದೇ ಹೊಸದಾಗಿ ಪ್ರಾರಂಭವಾಗುವ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ -2 ರಲ್ಲಿ ಭೌಗೋಳಿಕ ಗುರುತು ಹೊಂದಿರುವ ಕಲಾಕೃತಿಗಳ ಮಾರಾಟ ಮಳಿಗೆ ತೆರೆಯಲು ಉದ್ದೇಶಿಸಿದೆ.

***

Supplementary Note for Stared LAQ No.1635

Bidari craft is in existence from last 600 years in Bidar District of Karnataka State; currently there are around 300 artisans in Bidari ware crafts ,out of which 108 artisans have registered with the State Handicraft Development Corporation Limited.

Bidari ware is famous for its sturdiness and corrosion proof nature. There are mainly five main types in Bidari work. They are Tarkashi, Tehnishan, Mahtabi, Zarnishan and Zarbuland. Bidariware has been imparted the Geographical Indications (GI) tag.

The facilities extended to the Artisans of Bidariware are as follows

1. Distribution of raw materials like Silver and Zinc at 50% subsidized rate

   Details of quantity of raw material distributed for last 3 years are as follows

Sl.No.	Description	2016-17	2017-18	2018-19
1.	Silver (in Kgs)	44.200	28.200	42.200
2.	Zinc (in Kgs)	2760.750	1698.050	2862.100

Eventhough the raw materials are distributed at 50% subsidized rate, the corporation is extending credit facility to artisan for the payment of 50% rawmaterial cost. The same will be recovered at the time of procuring finished goods from the artisans

2. The corporation has provided Common facility centre(CFC) by installing necessary machineries and tools required for the manufacture of bidariware products. These CFC facility are used by registered as well as unregistered artisans.
3. The corporation is providing Marketing support by procuring bidariware items from artisans and selling through 12 outlets of corporation across India .

The sales details of last 3 years are as follows

4. Health camp were conducted and spectacles were distributed for needy artisans
5. The master craftman registered under the Development Commissioner (Handicrafts) have trainined 30 artisans in 2016-17 udner the Government of India scheme
6. Improved tool kits have been provided to trained artisans
7. This craft is classified as lesser known craft and to promote the sales 20% rebate is being extended for the customer.

Sl.No.	Description	2016-17	2017-18	2018-19
1	Sale value in Rs	33,45,695	50,76,997	49,81,368
1	Rebate value extended to customers at 20%	6,46,760.99	9,87,248.05	9,71,602.94

8. Apart from this, the direct sales form artisans is approximately around 60-70 lakhs per year.
9. Two artisans who were awarded with the highest honour of Shilpguru by Hon'ble President of India to Sri Shah Rasheed Ahmed Quadri and Sri Abdul Rauf. These artisans were also received National award. Apart from these, Moizuddin received National award from Government of India. State Government has also recognized artisans through State award and Merit certificate. State awardees are Shafiuddin, Rajkumar, Abdul Hakeem, Laxmi bai and Mazed Quadri.
10. The corporation has been providing Rs 10000/- as a cremation expenditure for registered artisans. From 2016, legal heirs of 12 deceased artisans have been provided with these benefits.
11. Corporation has tied up with M/s IRHPL (Indian Retail Handicrafts Pvt limited) to sale bidari ware products at Kempegowda International Airport at both domestic and international departures.
12. The corporation is also process of signing a MOU with flipcart to increase e-commerce sale
13. In addition to that the corporation is opening its GI out let to promote Bidariware handicraft at the upcoming KIAL terminal -2.